ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ ಮಹಿಳೆ



ಹೆಸರು : ಶ್ರೀಮತಿ ಚಂದ್ರಮ್ಮ ಗಡೇದ್ ಕೋಂ॥ ಸೋಮಶೇಖರಪ್ಪ ಗಡೇದ್

ವಿಳಾಸ : ಸಾ: ಸಂತೆಕೆಲ್ಲೂರು ಹೊ.: ಕಪಗಲ್ ತಾ: ಮಸ್ಕಿ ಜಿ: ರಾಯಚೂರು

ವಯಸ್ಸು : 42 ವರ್ಷ

ಶೈಕ್ಷಣಿಕ ವಿದ್ಯಾರ್ಹತೆ : 3 ನೇ ತರಗತಿ

ಮೊಬೈಲ್ ಸಂಖ್ಯೆ : 9632520241

ಕುಟುಂಬ ಸದಸ್ಯರ ಸಂಖ್ಯೆ : 05

ಒಟ್ಟು ಉಳುಮೆ ಭೂಮಿ : 35 ಎಕರೆ

ಬೆಳೆಗಳು/ಅರಣ್ಯ : ಸಾವಯವ ಕೃಷಿ ಮತ್ತು ಸಮಗ್ರ ಬೇಸಾಯ ಪದ್ಧತಿ ಅನುಸರಿಸಿ ತೊಗರಿ ಕಡಲೆ, ಜೋಳ ಮತ್ತು ಸಿರಿಧಾನ್ಯಗಳ ಬೆಳೆಗಳನ್ನು ಬೆಳೆಯುತ್ತಿದ್ದಾರೆ, ಅಲ್ಲದೆ ಹಣ್ಣಿನ ಬೆಳೆಗಳಾದ ದಾಳಿಂಬೆ, ಪಪಾಯ ಸೀತಾಫಲ, ನೇರಳೆ, ಬಾಳೆ, ಪೇರಲ, ಅಂಜೂರ, ತೆಂಗು, ಹೆಬ್ಬೇವು, ನುಗ್ಗೆ, ಕರಿಬೇವು, ಲಿಂಬೆ ಗಿಡಗಳಿವೆ.

ಕೃಷಿಯೇತರ ಉಪಕಸುಬುಗಳು : ಕುರಿ, ಕೋಳಿ, ಹೈನುಗಾರಿಕೆ ಜೊತೆಗೆ ಎರೆಹುಳ ಗೊಬ್ಬರ ತಯಾರಿಕೆ.

ಪ್ರಶಸ್ತಿ/ಗೌರವಗಳು : ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲವು ಇವರಿಗೆ 2012ನೇ ಸಾಲಿನ ಕೃಷಿ ಮೇಳದಲ್ಲಿ ಶ್ರೇಷ್ಠ ಕೃಷಿಕ ಮಹಿಳೆ ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಶ್ರೀ ಘನಮಠ ಶಿವಯೋಗಿಗಳ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಆದರ್ಶ ಕೃಷಿಕ ಪ್ರಶಸ್ತಿ ಪತ್ರ ನೀಡಿದ್ದಾರೆ ಹಾಗೂ ಹಲವಾರು ಸಂಘ ಸಂಸ್ಥೆಗಳು ಇವರಿಗೆ ಆದರ್ಶ ಕೃಷಿ ಪ್ರಶಸ್ತಿ ನೀಡಿ ಗೌರವಿಸಿದೆ.

ವಾರ್ಷಿಕ ಒಟ್ಟು ಆದಾಯ : **ಅಂದಾಜು 15 ರಿಂದ 20 ಲಕ್ಷ**

ವಿಶೇಷತೆಗಳು :

- ಒಟ್ಟು 35 ಎಕರೆ ಜಮೀನಿನಲ್ಲಿ ಸುಮಾರು 15 ವರ್ಷಗಳಿಂದ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ.
- ರೇಷ್ಮೆ ಕೃಷಿಯನ್ನು ಪ್ರಾರಂಭಿಸಿ ನಂತರ ಸಾವಯವ ಕೃಷಿಯಲ್ಲಿ ರೇಷ್ಮೆ ಬೆಳೆ ಬೆಳೆಯುತ್ತಿದ್ದಾರೆ
- ತರಕಾರಿ ಬೆಳೆಗಳನ್ನು ಸಾವಯುವ ಪದ್ದತಿಯಲ್ಲಿ ಬೆಳೆಯಲಾಗುತ್ತಿದೆ.
- ಕೃಷಿಹೊಂಡ ಸಹಾಯದಿಂದ ಹನಿ ನೀರಾವರಿ ಅಳವಡಿಸಿಕೊಂಡು ನಿಂಬೆ, ತೆಂಗು, ಮಾವು, ಕರೀಬೇವು ಪೇರಲ, ದಾಳಿಂಬೆ, ಬಾಳೆ & ಪಪಾಯ ಇತರ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ತೊಗರಿ, ಕಡಲೆ, ಶೇಂಗಾ, ಜೋಳ ಮತ್ತು ಸಿರಿಧಾನ್ಯ ಬೆಳೆಯಲ್ಲಿ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಅಧಿಕ ಇಳುವರಿ ಪಡಯುತ್ತಿದ್ದಾರೆ.



- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ದೊರಕುವ ಸಾವಯುವ ಗೊಬ್ಬರಗಳಾದ ಟ್ರೈಕೋಡರ್ಮ್, ಸುಡೊಮೊನಾಸ್, ಅಜೋಸ್ಪಿರಿಲಮ್, ಮೆಟರೈಜಿಯಮ್ ಮತ್ತು ಇತರೆ ಪರಿಕಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ.
- ತರಕಾರಿ ಇತರೆ ಬೆಳೆ ಉಳಿಕೆಗಳನ್ನು ಸುಡದೆ ಭೂಮಿಗೆ ಹೊದಿಕೆ ಮಾಡಿ (ಮಲ್ಚಿಂಗ್) ಭೂಮಿಯ ಫಲವತ್ತೆತೆಯನ್ನು ಕಾಪಾಡಿಕೊಂಡು ಬಂದಿರುತ್ತಾರೆ.
- ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ದ್ವಿದಳ ಧಾನ್ಯಗಳು, ಎಣ್ಣೆಕಾಳು ಬೆಳೆಗಳನ್ನು ಬೆಳೆಯುತ್ತಾ ಮಣ್ಣು & ನೀರಿನ ಸಂರಕ್ಷಣೆಯನ್ನು ಮಾಡುತ್ತಿದ್ದಾರೆ.
- ಇವರ ಜಮೀನಿನಲ್ಲಿ ಪ್ರತಿ ದಿನ 5 ರಿಂದ 6 ಜನ ಕೃಷಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.
- ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.









ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ ಮಹಿಳೆ



ಹೆಸರು	:	**ಶ್ರೀಮತಿ ಆಶಾ ಸಂಗಾಸ್ತರ್**
ವಿಳಾಸ	:	ಸಾ: ಮುರನ್ವರ್ ಹೊ.: ಕಲ್ಮಲಾ ತಾ: & ಜಿ: ರಾಯಚೂರು
ವಯಸ್ಸು	:	42 ವರ್ಷ
ಶೈಕ್ಷಣಿಕ ವಿದ್ಯಾರ್ಹತೆ	:	ಎಂ. ಎಸ್‌ಸಿ. (ಬೌತ ಶಾಸ್ತ್ರ)
ಮೊಬೈಲ್ ಸಂಖ್ಯೆ	:	8861755750
ಕುಟುಂಬ ಸದಸ್ಯರ ಸಂಖ್ಯೆ	:	05
ಒಟ್ಟು ಉಳುಮೆ ಭೂಮಿ	:	10 ಎಕರೆ
ಬೆಳೆಗಳು/ಅರಣ್ಯ	:	10 ಎಕರೆಯಲ್ಲಿ ಹತ್ತಿ ಮತ್ತು ತೊಗರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಅಲ್ಲದೆ, ಇನ್ನಿತರ ಗಿಡ ಮರಗಳಿವೆ ಹಾಗೂ ಸಾವಯವ ಕೃಷಿ ಮತ್ತು ಸಮಗ್ರ ಕೃಷಿ ಅನುಸರಿಸುತ್ತಿದ್ದಾರೆ.
ಕೃಷಿಯೇತರ ಉಪಕಸುಬುಗಳು	:	15 ಹಸು, 65 ಮೇಕೆ & 25 ಕುರಿಗಳು ಜೇನು, ಕೋಳಿ, ಹೈನುಗಾರಿಕೆ ಜೊತೆಗೆ ಎರೆಹುಳ ಗೊಬ್ಬರ ತಯಾರಿಕೆ.
ಪ್ರಶಸಿ/ಗೌರವಗಳು	:	–
ವಾರ್ಷಿಕ ಒಟ್ಟು ಆದಾಯ	:	**ಅಂದಾಜು 16–17 ಲಕ್ಷ**
ವಿಶೇಷತೆಗಳು	:	ಒಟ್ಟು 10 ಎಕರೆ ಜಮಿನು ಹೊಂದಿರುತ್ತಾರೆ. ಇವರು ಕ್ಷೇತ್ರ ಬೆಳೆಗಳು ಮತ್ತು ಜಾನುವಾರುಗಳು ಹೊಂದಿರುತ್ತಾರೆ. ಇವರಲ್ಲಿ ಕಂಡು ಬಂದಂತಹ ಸಮಸ್ಯೆಗಳು. ತೊಗರಿಯಲ್ಲಿ ಕಾಯಿ ಕೊರಕ, ಕಡಲೆ ಮತ್ತು ಜೋಳದಲ್ಲಿ ತೀವ್ರವಾದ ಕೀಟ ಮತ್ತು ರೋಗ, ಮೇವಿನ ಕೊರತೆ, ಕಡಿಮೆ ಹಾಲಿನ ಇಳುವರಿ ಮತ್ತು ಜಾನುವಾರುಸಾಕಣೆಕೆಯಲ್ಲಿ ಅಸಮತೋಲತ ಆಹಾರ ಸೂತ್ರೀಕರಣದಂತಹ ಸಮಸ್ಯೆಗಳನ್ನು ಎದುರಿಸಿದರು. ಕೃಷಿ ವಿಜ್ಞಾನ ಕೇಂದ್ರ ಸಲಹೆಯಂತೆ ಸಮಗ್ರ ಪೋಷಕಾಂಶ ನಿರ್ವಹಣೆ, ಸಮಗ್ರ ಕೀಟ ಮತ್ತು ರೋಗ ನಿರ್ವಹಣೆಯನ್ನು ಕೈಗೊಳ್ಳಲಾಯಿತು.ಹೊಸ ಹೈಬ್ರಿಡ್ ಪರಿಚಯ, ಜಾನುವಾರು ಸಾಕಣೆಯಲ್ಲಿ ರೋಗ ಪೋಷಕಾಂಶ ನಿರ್ವಹಣೆ. ಅವರು ಈಗ ಕ್ಷೇತ್ರ ಬೆಳೆಗಳು (ತೊಗರಿ 1,52,500/–, ಕಡಲೆ 1,32,000/–, ಜೋಳ 36,750/–) ಮತ್ತು ಜಾನುವಾರುಗಳಿಂದ (ಹಸು 6,61,500/–, ಮೇಕೆ 4,87,500/–, ಕುರಿಗಳು 2,00,000/–) ವಾರ್ಷಿಕ ರೂ.16,70,250/–ಒಟ್ಟು ಆದಾಯವನ್ನು ಪಡೆಯುತ್ತಿದ್ದಾರೆ, ಮೂಲ ವರ್ಷಗಳ ಆದಾಯಕ್ಕೆ (ರೂ. 6.75.900/) ಹೋಲಿಸಿದರೆ ಅವರ ಆದಾಯವು 160.70% ಹೆಚ್ಚಾಗಿದೆ.









ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ ಮಹಿಳೆ



ಹೆಸರು	:	**ಅನಸೂಯ ದೇವಪ್ಪ**
ವಿಳಾಸ	:	ಸಾ: ಗುಂಡಸಾಗರ ಹೊ. & ತಾ: ಲಿಂಗಸೂಗೂರು ಜಿ: ರಾಯಚೂರು
ವಯಸ್ಸು	:	42
ಶೈಕ್ಷಣಿಕ ವಿದ್ಯಾರ್ಹತೆ	:	4 ನೇ ತರಗತಿ
ಮೊಬೈಲ್ ಸಂಖ್ಯೆ	:	7022030646
ಕುಟುಂಬ ಸದಸ್ಯರ ಸಂಖ್ಯೆ	:	04
ಒಟ್ಟು ಉಳುಮೆ ಭೂಮಿ	:	08
ಬೆಳೆಗಳು	:	ನಿಂಬೆ, ತೆಂಗು, ಮಾವು, ಕರಿಬೇವು, ನೇರಳೆ, ಪೇರಲ & ತೊಗರಿ ಇತರೆ (ಮಹಗನಿ (1500), ನೇರಳೆ (300), ಕೃಷಿ ಹೊಂಡ (5000 ಮೀನು) ಹಾಗೂ ವಿವಿಧ ಮೇವಿನ ಬೆಳೆಗಳು)
ದನಕರು/ಮೀನು	:	ಸ್ವದೇಶಿ ಆಕಳು–10, ಕುರಿಗಳು–2, ಮೇಕೆ–2 ಹಾಗೂ ಕೋಳಿ–12
ಉದ್ಯಮಗಳು	:	ಕೃಷಿ ಮತ್ತು ಇತರೆ ಉಪಕಸಬುಗಳು
ಪ್ರಶಸ್ತಿ/ಗೌರವಗಳು	:	1. ಬಸವೇಶ್ವರ ಸಹಕಾರಿ ಬ್ಯಾಂಕಿನಿಂದ 2024ರಲ್ಲಿ ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿ 2. ಶ್ರೇಷ್ಠ ಕೃಷಿ ಮಹಿಳೆ ಪ್ರಶಸ್ತಿ 2024–25 ಕೃ.ವಿ.ವಿ., ರಾಯಚೂರು
ವಾರ್ಷಿಕ ಒಟ್ಟು ಆದಾಯ	:	**ಅಂದಾಜು 10–12 ಲಕ್ಷ**

ವಿಶೇಷತೆಗಳು

- ಒಟ್ಟು 08 ಎಕರೆ ಜಮೀನು ಹೊಂದಿರುತ್ತಾರೆ. ಸುಮಾರು 10 ವರ್ಷಗಳಿಂದ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ
- ಊರುಗಾಳು ಪದ್ಧತಿಯಲ್ಲಿ ತೊಗರಿ, ನೀರಿನ ಸಂರಕ್ಷಣೆ
- ಒಂದು 60*60 ವಿಸ್ತೀರ್ಣದ ಕೃಷಿ ಹೊಂಡ ಹೊಂದಿರುತ್ತಾರೆ.
- ಹೊಲದ ಸುತ್ತಮುತ್ತ ಬದುವನ್ನು ಕೂಡ ನಿರ್ಮಿಸಿಕೊಂಡಿದ್ದಾರೆ
- ಒಟ್ಟು ಜಮೀನು ನೀರಾವರಿಯಾಗಿದ್ದು ಇದರಲ್ಲಿ ನಿಂಬೆ, ತೆಂಗು, ಮಾವು, ಕರಿಬೇವು, ನೇರಳೆ, ಪೇರಲ, ಮಹಾಘನಿ ಮತ್ತು ತೊಗರಿ ಬೆಳೆಗಳನ್ನು ಬಳೆಯುತಿದ್ದಾರೆ.
- ಸುಧಾರಿತ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಸಿರಿಧಾನ್ಯಗಳು, ದ್ವಿದಳ ಧಾನ್ಯಗಳು, ಎಣ್ಣೆಕಾಳು ಬೆಳೆಗಳನ್ನು ಸಹ ಬೆಳೆಯುತ್ತಿದ್ದಾರೆ.
- ತೊಗರಿ ಬೆಳೆಯಲ್ಲಿ ಕುಡಿ ಚಿವುಟುವಿಕೆ ಹಾಗೂ ಹನಿ ನೀರವಾರಿ ಪದ್ಧತಿಯ ತಂತ್ರಜ್ಞಾನಗಳನ್ನು ಆಳವಡಿಸಿಕೊಂಡು ಹೆಚ್ಚಿನ ಇಳುವರಿಯನ್ನು ಪಡೆಯುತ್ತಿದ್ದಾರೆ.
- ತರಕಾರಿ ಇತರ ಬೆಳೆ ಹುಳಿಕೆಗಳನ್ನು ಸುಡದೆ ಭೂಮಿಗೆ ಹೊದಿಕೆ ಮಾಡಿ (ಮಲ್ಚಿಂಗ್) ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡು ಬಂದಿರುತ್ತಾರೆ.
- ಜಮೀನಲ್ಲಿ ಕಸಕಡ್ಡಿಗಳನ್ನು ಬಳಸಿ ಎರೆಹುಳ ಗೊಬ್ಬರವನ್ನು ತಯಾರಿಸಿ ಜಮೀನಿಗೆ ಬಳಸುವುದರೊಂದಿಗೆ ಸಾವಯವ ಕೃಷಿಯ ಬಗ್ಗೆ ಹೆಚ್ಚು ಗಮನ ಹರಿಸಿ, ಮಾರಾಟವು ಸಹ ಮಾಡುತ್ತಿದ್ದಾರೆ.
- ತರಕಾರಿ ಬೆಳೆಗಳನ್ನು ಸಾವಯವ ಪದ್ಧತಿಯಲ್ಲಿ ಬೆಳೆದು ಸ್ಥಳೀಯ ಮಾರುಕಟ್ಟಗೆ ಮಾರಾಟ ಮಾಡುತ್ತಿದ್ದಾರೆ.
- ಇವರ ಜಮೀನಿನಲ್ಲಿ ಪ್ರತಿ ದಿನ 3 ರಿಂದ 4 ಜನ ಕೃಷಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.
- ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.











ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ ಮಹಿಳೆ



ಹೆಸರು : **ಪ್ರೇಮಲತಾ ಗಂ/ ಶಾಂತಕುಮಾರ**

ವಿಳಾಸ : ಸಾ: ಜಿನ್ನಾಪೂರು ಹೊ.: ಜಿನ್ನಾಪೂರು ತಾ: ಅರಕೇರಾ ಜಿ: ರಾಯಚೂರು

ವಯಸ್ಸು : 40 ವರ್ಷ

ಶೈಕ್ಷಣಿಕ ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.

ಮೊಬೈಲ್ ಸಂಖ್ಯೆ : 7338220359

ಕುಟುಂಬ ಸದಸ್ಯರ ಸಂಖ್ಯೆ : 07

ಒಟ್ಟು ಉಳುಮೆ ಭೂಮಿ : 12 ಎಕರೆ

ಬೆಳೆಗಳು/ಅರಣ್ಯ : ಬೆಳೆಗಳು ಹಾಗೂ ಅರಣ್ಯಕೃಷಿ: 1.10 ಎಕರೆ ಲಿಂಬು, (170 ಗಿಡ), ತೆಂಗು (20 ಗಿಡ), 20 ಗುಂಟೆ ದುಂಡು ಮಲ್ಲಿಗೆ (700 ಸಸಿ), ಶ್ರೀಗಂದ (10), ನೇರಳೆ (10), ಚೆಂಡು ಹೂವು 10 ಗುಂಟೆ, 9 ಎಕರೆ ಭತ್ತ. ಇನ್ನಿತರ ಗಿಡ ಮರಗಳಿವೆ ಹಾಗೂ ಸಾವಯವ ಕೃಷಿ ಮತ್ತು ಸಮಗ್ರ ಕೃಷಿ ಅನುಸರಿಸುತ್ತಿದ್ದಾರೆ.

ಕೃಷಿಯೇತರ ಉಪಕಸುಬುಗಳು : ಹೈನುಗಾರಿಕೆ (2 ಮಲೆನಾಡ ಗಿಡ್ಡ ಆಕಳು.) ಜೊತೆಗೆ ಎರೆಹುಳ ಗೊಬ್ಬರ ತಯಾರಿಕೆ.

ಪ್ರಶಸ್ತಿ/ಗೌರವಗಳು : –

ವಾರ್ಷಿಕ ಒಟ್ಟು ಆದಾಯ : **6.00 ಲಕ್ಷ**

ವಿಶೇಷತೆಗಳು :

- ಒಟ್ಟು 12 ಎಕರೆ ಭೂಮಿಯಲ್ಲಿ 15 ರಿಂದ 20 ವರ್ಷದಿಂದ ಕೃಷಿಯಲ್ಲಿ ತೊಡಗಿದ್ದಾರೆ.
- 2.38 ಗುಂಟೆ ತೋಟಗಾರಿಕೆ ಹಾಗೂ ಸಾವಯುವ ಕೃಷಿ ಮಾಡುತ್ತಿದ್ದಾರೆ.
- ಬಿಜಾಪೂರು ಭೀರಪ್ಪ ವಗ್ಗಿ ಪೂಜಾರಿ ತೋಟದಿಂದ ಲಿಂಬು (170 ಸಸಿ) ತಂದಿರುತ್ತಾರೆ
- ಜೀವಾಮೃತ ಹಾಗೂ ಟ್ರೈಕೋಡರ್ಮಾ ಬಳಕೆ ಮಾಡುತ್ತಿದ್ದಾರೆ.
- ದಸರಾ ಹಾಗೂ ದೀಪಾವಳಿಗೆ ಚೆಂಡು ಹೂ ಮಾರಾಟ
- 5 ತಿಂಗಳು ನಿರಂತರ ದುಂಡುಮಲ್ಲಿಗೆ 1.15 ಕೆ.ಜಿ ಪ್ರತಿ ದಿನಕ್ಕೆ ಇಳುವರಿ ತೆಗೆಯುತ್ತಾರೆ.
- ಪ್ರತಿ ದಿನ 300 ರಿಂದ 500 ಲಿಂಬು ನೇರವಾಗಿ ಮಾರಾಟ ಮಾಡುತ್ತಾರೆ
- ಕೃಷಿಯಿಂದ ನೆಮ್ಮದಿಯ ಜೀವನ ನಡೆಸುತ್ತಾ ಇತರ ರೈತರಿಗೂ ಮಾದರಿಯಾಗಿದ್ದಾರೆ.












ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ ಮಹಿಳೆ



ಹೆಸರು : ಶ್ರೀಮತಿ. ಶಾರದ ಗಂ/ ಗೋವಿಂದ

ವಿಳಾಸ : ಹೀರಾಪುರ ತಾ & ಜಿ: ರಾಯಚೂರು

ವಯಸ್ಸು : 35 ವರ್ಷ

ಕುಟುಂಬ ಸದಸ್ಯರ ಸಂಖ್ಯೆ : 05

ಶೈಕ್ಷಣಿಕ ವಿದ್ಯಾರ್ಹತೆ : ಪಿ.ಯು.ಸಿ.

ಮೊಬೈಲ್ ಸಂಖ್ಯೆ : 9972584720

ಒಟ್ಟು ಉಳುಮೆ ಭೂಮಿ : 10.00

ಬೆಳೆಗಳು ಹಾಗೂ ಅರಣ್ಯ : ಪಪ್ಪಾಯ–3 ಎಕರೆ, ಹತ್ತಿ–5 ಎಕರೆ, ಮೆಣಸಿನಕಾಯಿ–2 ಎಕರೆ, ಈರುಳ್ಳಿ–1 ಎಕರೆ, ಭತ್ತ–2 ಎಕರೆ ಹಾಗೂ ಚೆಂಡು ಹೂ ಶ್ರೀಗಂಧ, ಮಹಾಗನಿ

ದನಕರುಗಳು : 8 ಆಕಳು, 2 ಎತ್ತು, 3 ಕರುಗಳು 6 ಕುರಿಮರಿಗಳು

ಕೃಷಿಯೇತರ ಉಪಕಸುಬುಗಳು : ಹೈನುಗಾರಿಕೆ

ಪ್ರಶಸ್ತಿ/ಗೌರವಗಳು : –

ವಾರ್ಷಿಕ ಆದಾಯ : 5 ಲಕ್ಷ

ವಿಶೇಷತೆಗಳು



- ಒಟ್ಟು 10 ಎಕರೆ ಜಮೀನಿನಲ್ಲಿ ಸುಮಾರು 10–15 ವರ್ಷಗಳಿಂದ ಕೃಷಿಯಲ್ಲಿ ತೊಡಗಿರುತ್ತಾರೆ.
- 1 ಕೃಷಿ ಹೊಂಡ ನಿರ್ಮಿಸಿಕೊಂಡು ವರ್ಷವಿಡಿ ಬೆಳೆ ಬೆಳೆಯುತ್ತಾರೆ.
- ಹನಿ ನೀರಾವರಿ ಮಾಡಿ ಪಪ್ಪಾಯ ಹಾಗೂ ಮೆಣಸಿನಕಾಯಿ ಬೆಳೆ ಬೆಳೆಯುತ್ತಾರೆ.
- ಐ.ಸಿ.ಎ.ಆರ್.–ಕೃಷಿ ವಿಜ್ಞಾನ ಕೇಂದ್ರ, ರಾಯಚೂರಿನ ವಿಜ್ಞಾನಿಗಳನ್ನು ಭೇಟಿ ಮಾಡಿ ವಿಜ್ಞಾನಿ ಸಲಹೆ ಮೇರೆಗೆ ಕಡಿಮೆ ಖರ್ಚು ಮಾಡಿ ಕೃಷಿಯನ್ನು ಮಾಡುತ್ತಾರೆ.
- ದನಗಳಿಗೆ ಮೇವಿನ ಬೆಳೆಗಳನ್ನು CoFS–29 ಬೆಳೆದಿರುತ್ತಾರೆ.
- ಇವರ ಜಮೀನಿನಲ್ಲಿ ದಿನವಿಡಿ 5 ಜನ ಕೆಲಸ ನಿರ್ವಹಿಸುತ್ತಾರೆ.
- ಇವರು ತಮ್ಮ ಜಮೀನಿನಲ್ಲಿ ದಸರಾ ಹಾಗೂ ದೀಪಾವಳಿ ಹಬ್ಬದ ಸಮಯಕ್ಕೆ ಚೆಂಡು ಹೂ ಬೆಳೆಯನ್ನು ಬೆಳೆಯುತ್ತಾರೆ.
- ಕೃಷಿಯಿಂದ ನೆಮ್ಮದಿಯ ಜೀವನ ನಡೆಸುತ್ತಾ ಇತರ ರೈತರಿಗೂ ಮಾದರಿಯಾಗಿದ್ದಾರೆ.











ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ ಮಹಿಳೆ



ಹೆಸರು : ಕು.ತೇಜಸ್ವಿನಿ ಎ. ತಂದೆ ನಾಗಮಲ್ಲೇಶ್ವರಾವ್

ವಿಳಾಸ : ಸಾ: ರಬ್ಬನಕಲ್ ಹೊ.: & ತಾ: ಮಾನ್ವಿ ಜಿ: ರಾಯಚೂರು

ವಯಸ್ಸು : 27 ವರ್ಷ

ಶೈಕ್ಷಣಿಕ ವಿದ್ಯಾರ್ಹತೆ : ಎಂ. ಎಸ್.ಸಿ (ಕೃಷಿ)

ಮೊಬೈಲ್ ಸಂಖ್ಯೆ : 9071907995

ಕುಟುಂಬ ಸದಸ್ಯರ ಸಂಖ್ಯೆ : 05

ಒಟ್ಟು ಉಳುಮೆ ಭೂಮಿ : 20 ಎಕರೆ

ಬೆಳೆಗಳು/ಅರಣ್ಯ : ಭತ್ತ, ತೊಗರಿ ಮತ್ತು ಜೋಳ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಜೊತೆಗೆ ಹಣ್ಣಿನ ಬೆಳೆಗಳಾದ ಮಾವು, ಮೊಸಂಬಿ, ಸೀತಾಫಲ, ಸಪೋಟ್, ಡ್ರಾಗ್ಯನ್ ಹಣ್ಣು, ಪೇರಲ, ತೆಂಗಿನ ಮರಗಳಿವೆ, ಹಲಸಿನ ಗಿಡ, ಹೆಬ್ಬೇವು, ನುಗ್ಗೆ, ಕರಿಬೇವು, ಲಿಂಬು, ರಕ್ತ ಚಂದನ, ಹಾಗೂ ಕೃಷಿಹೊಂಡ. ಸಾವಯವ ಕೃಷಿ ಮತ್ತು ಸಮಗ್ರ ಬೇಸಾಯ ಪದ್ಧತಿ ಅನುಸರಿಸುತ್ತಿದ್ದಾರೆ.



ಕೃಷಿಯೇತರ ಉಪಕಸುಬುಗಳು : ಕೋಳಿ:50 ಜೇನು ಪೆಟ್ಟಿಗೆ 4 ಜೊತೆಗೆ ಎರೆಹುಳ ಗೊಬ್ಬರ ತಯಾರಿಕ. ಘಟಕ

ಪ್ರಶಸಿ/ಗೌರವಗಳು : –

ವಾರ್ಷಿಕ ಒಟ್ಟು ಆದಾಯ : **ಅಂದಾಜು 08 ರಿಂದ 10 ಲಕ್ಷ**

ವಿಶೇಷತೆಗಳು :



- ಒಟ್ಟು 20 ಎಕರೆ ಜಮೀನು ಹೊಂದಿರುತ್ತಾರೆ ಸುಮಾರು 5 ವರ್ಷಗಳಿಂದ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ.
- ಒಂದುವರೆ ಎಕರೆ ಯಲ್ಲಿ ಕೃಷಿಹೊಂಡ ಇದೆ.
- ಭತ್ತದ ಬೆಳೆಯನ್ನು 09 ಎಕರೆಯಲ್ಲಿ ಯಾಂತ್ರಿಕೃತ ಕೃಷಿ ಅಳವಡಿಸಿಕೊಂಡು ಬೆಳೆಯುತ್ತಿದ್ದಾರೆ
- ಒಂದು ವರ್ಷದಿಂದ ಜೇನು ಸಾಕಾಣಿಕೆ ಮಾಡಿ, ವಾರ್ಷಿಕವಾಗಿ 6 ಕೆ.ಜಿ. ಜೇನುತುಪ್ಪ ಪಡೆಯುತ್ತಿದ್ದಾರೆ.
- ಒಟ್ಟು ಜಮೀನು ಹನಿ ನೀರಾವರಿಯಾಗಿದ್ದು
- ಪೇರಲ ಬೆಳೆಯಲ್ಲಿ ಅಧಿಕ ಸಾಂದ್ರತೆಯ ಬೆಳೆಯನ್ನು ಬೆಳೆದಿರುತ್ತಾರೆ (ಉದಾ: ಸಾಲಿನಿಂದ ಸಾಲಿಗೆ 12 ಅಡಿ ಗಿಡದಿಂದ ಗಿಡಕ್ಕೆ 8 ಅಡಿ ಅಂತರ) ಮೊಸಂಬಿ, ಸೀತಾಫಲ, ಸಪೋಟ್, ಡ್ರಾಗ್ಯನ್ ಹಣ್ಣು, ಪೇರಲ, ತೆಂಗಿನ ಮರಗಳಿವೆ, ಹಲಸಿನ ಗಿಡ, ಹೆಬ್ಬೇವು, ನುಗ್ಗೆ, ಕರಿಬೇವು, ಮತ್ತು ಲಿಂಬು ಇತರ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ದೊರಕುವ ಸಾವಯವ ಗೊಬ್ಬರಗಳಾದ ಟ್ರೈಕೋಡರ್ಮ್, ಸುಡೊಮೊನಾಸ್, ಅಜೋಸ್ಪಿರಿಲಮ್, ಮೆಟರೈಜಿಯಮ್ ಮತ್ತು ಇತರೆ ಪರಿಕಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ.
- ಇವರ ಜಮೀನಿನಲ್ಲಿ ಪ್ರತಿ ದಿನ 4 ಜನ ಕೃಷಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.
- ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.









ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ ಮಹಿಳೆ



ಹೆಸರು : **ಸುಧಾ ಗಂ/ ಎನ್. ಉದಯಕುಮಾರ**

ವಿಳಾಸ : ಗ್ರಾಮ– ಸಿರವಾರ ತಾ॥ ಹೋ॥ ಸಿರವಾರ ಜಿ॥ ರಾಯಚೂರು

ವಯಸ್ಸು : 54 ವರ್ಷ

ಶೈಕ್ಷಣಿಕ ವಿದ್ಯಾರ್ಹತೆ : ಬಿ. ಫಾರ್ಮಸಿ.

ಮೊಬೈಲ್ ಸಂಖ್ಯೆ : 94485 70677

ಕುಟುಂಬ ಸದಸ್ಯರ ಸಂಖ್ಯೆ : 05

ಒಟ್ಟು ಉಳುಮೆ ಭೂಮಿ : 7.2 ಎಕರೆ

ಬೆಳೆಗಳು/ಅರಣ್ಯ : ಮಾವು, ನೆರಳೆ ಹಣ್ಣು, ನುಗ್ಗೆ, ಕರಿಬೇವು, ಲಿಂಬು, ಪಪ್ಪಾಯ, ಸೀತಾಫಲ, ತೆಂಗು ಮತ್ತು ಮೆಕ್ಕೆಜೋಳ

ಕೃಷಿಯೇತರ ಉಪಕಸುಬುಗಳು : ಹೈನುಗಾರಿಕೆ 4 ಆಕಳು, 2 ಎಮ್ಮೆ, 30 ಟಗರು, 3 ನಾಯಿಗಳು.


ಪ್ರಶಸಿ/ಗೌರವಗಳು : 1. ಕೆ. ಆರ್ ನಾರಾಯಣ ಫೌಂಡೇಷನ್ ಬೆಂಗಳೂರು ಇವರಿಂದ ಉತ್ತಮ ರೈತ ಪ್ರಶಸ್ತಿ
2. ಕಲಾ ಸಂಕಲನ ಸಂಸ್ಥೆ ವತಿಯಿಂದ ಬಸವ ಪ್ರಶಸ್ತಿ
3. ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಪ್ರಶಸ್ತಿ

ವಾರ್ಷಿಕ ಒಟ್ಟು ಆದಾಯ : **9.50 ಲಕ್ಷ**


ವಿಶೇಷತೆಗಳು :

- ಇವರು ತಮ್ಮ 7.12 ಎಕರೆ ಜಮೀನಲ್ಲಿ ಸಮಗ್ರ ಕೃಷಿ ಪದ್ಧತಿ ಅಳವಡಿಕೆ ಮಾಡಿದ್ದಾರೆ.
- 20 ಗುಂಟೆ ಜಮೀನಿನಲ್ಲಿ ಕೃಷಿ ಹೊಂಡ ನಿರ್ಮಿಸಿದ್ದಾರೆ
- 7.12 ಎಕರೆ ತೋಟಕ್ಕೆ ಹನಿ ನೀರಾವರಿ ಅಳವಡಿಕೆ ಮಾಡಿದ್ದಾರೆ.
- ಪೆನ್ಸಿಂಗ್ ಬಳಸಿಕೊಂಡು ತಮ್ಮ ಜಮೀನು ರಕ್ಷಣೆ ಮಾಡಿಕೊಂಡಿದ್ದಾರೆ.
- ಸುಮಾರು 5 – 20 ಜೇನು ಪೆಟ್ಟಿಗೆ ಇಟ್ಟುಕೊಂಡು ಜೇನು ಕೃಷಿ ಮಾಡುತ್ತಿದ್ದಾರೆ.
- ಜಮೀನಿನಲ್ಲಿ ಇರುವ ಕಳೆಗಳು ತ್ಯಾಜ್ಯ ಕಸಕಡ್ಡಿ ಬಳಸಿ ಎರೆಹುಳು ಗೊಬ್ಬರ ತಯಾರಿಸಿ ಜಮೀನಿಗೆ ಬಳಸುತ್ತಾರೆ.
- ಇವರ ಜಮೀನಲ್ಲಿ 4 ರಿಂದ 5 ಜನ ಕೂಲಿ ಕಾರ್ಮಿಕರು ದಿನ ನಿತ್ಯ ಕೆಲಸ ನಿರ್ವಹಿಸುತ್ತಾರೆ
- ಇವರು "ಉದಯವನ" ಹೆಸರಿನಲ್ಲಿ ಪ್ರೇಕ್ಷಣಾ ಸ್ಥಳಮಾಡಿ, ತೋಟದಲ್ಲಿ ಸ್ವಿಮ್ಮಿಂಗ್, ಟೆಬಲ್ ಟೆನಿಸ್, ಕ್ರಿಕೆಟ್ ನೆಟ್ ಅಭ್ಯಾಸ ಹಾಗೂ ಸಿರಿಧಾನ್ಯ ಪದಾರ್ಥಗಳನ್ನು ಬಳಸಿ ತಿಂಡಿ ತಿನಿಸು ಮಾಡುತ್ತಾರೆ.
- ಇವರು ಸಾಧನೆ ಮಾಡಿದ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರಿಗೆ ಊರಿನ ಹಿರಿಯಗೆ ಸನ್ಮಾನ ಮಾಡಿ ಪೋತ್ಸಾಹಿಸುತ್ತಾರೆ.













ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರು

ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ, ರಾಯಚೂರು

ನಮ್ಮ ಹೆಮ್ಮೆಯ ರೈತ ಮಹಿಳೆ



ಹೆಸರು : ಶ್ರೀಮತಿ ಜಯಲಕ್ಷ್ಮಿ ಪಾಟೀಲ್

ವಿಳಾಸ : ಸಾ: ಬೊಮ್ಮನಾಳ್ ಹೊ.: ಕಪಗಲ್ ತಾ: ಮಾನವಿ ಜಿ: ರಾಯಚೂರು

ವಯಸ್ಸು : 42 ವರ್ಷ

ಶೈಕ್ಷಣಿಕ ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ.

ಮೊಬೈಲ್ ಸಂಖ್ಯೆ : 9353857257

ಕುಟುಂಬ ಸದಸ್ಯರ ಸಂಖ್ಯೆ : 02

ಒಟ್ಟು ಉಳುಮೆ ಭೂಮಿ : 37 ಎಕರೆ

ಬೆಳೆಗಳು/ಅರಣ್ಯ : 15 ಎಕರೆಯಲ್ಲಿ ಹತ್ತಿ ಮತ್ತು ತೊಗರಿ ಬೆಳೆಗಳನ್ನು ಬೆಳೆಯುತ್ತಿದ್ದಾರೆ ಅಲ್ಲದೆ, 1000 ಮಹಾಗನಿ, 20 ನಿಂಬೆ, 5 ಮಾವು, 15 ಗುಲಾಬಿ, 30 ದಾಂಡೆಲಿ ಟೀಕ್, 20 ಅಂಜೂರ, 20 ಸೀತಾಫಲ, 500 ಮಲ್ಲಿಗೆ, 200 ನುಗ್ಗೆ, 15 ತೆಂಗು, 5 ಕರಿಬೇವು, 5 ಸಪೋಟ, 3 ವಾಟರ್ ಆಫಲ್, 2 ಸ್ಟಾರ್ ಫ್ರುಟ್, 5 ಬೆಟ್ಟದನೆಲ್ಲಿ, 3 ಬಟರ್ ಫ್ರಟ್, 25 ಸಿಲ್ವರ್, 20 ಪೇರಲ, 5 ಮೊಸಂಬಿ, 10 ಹಬ್ಬೇವು, ಇನ್ನಿತರ ಗಿಡ ಮರಗಳಿವೆ ಹಾಗೂ ಸಾವಯವ ಕೃಷಿ ಮತ್ತು ಸಮಗ್ರ ಕೃಷಿ ಅನುಸರಿಸುತ್ತಿದ್ದಾರೆ.

ಕೃಷಿಯೇತರ ಉಪಕಸುಬುಗಳು : ಜೇನು, ಕೋಳಿ, ಹೈನುಗಾರಿಕೆ ಜೊತೆಗೆ ಎರೆಹುಳ ಗೊಬ್ಬರ ತಯಾರಿಕೆ.

ಪ್ರಶಸಿ/ಗೌರವಗಳು : ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಸ್ತ್ರೀರತ್ನ ಪ್ರಶಸ್ತಿ & ಕೃಷಿ ರತ್ನ ಪ್ರಶಸ್ತಿ.

ವಾರ್ಷಿಕ ಒಟ್ಟು ಆದಾಯ : **ಅಂದಾಜು 10 ರಿಂದ 12 ಲಕ್ಷ**

ವಿಶೇಷತೆಗಳು:

- ಒಟ್ಟು 37 ಎಕರೆ ಜಮೀನು ಹೊಂದಿರುತ್ತಾರೆ ಸುಮಾರು 6 ವರ್ಷಗಳಿಂದ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ.
- ಮಣ್ಣು ಮತ್ತು ನೀರಿನ ಸಂರಕ್ಷಣೆಯನ್ನು ಮಾಡುತ್ತಿದ್ದಾರೆ.
- ಒಂದು 80×80 ವಿಸ್ತೀರ್ಣದ ಕೃಷಿ ಹೊಂಡ ಹೊಂದಿರುತ್ತಾರೆ
- ಒಟ್ಟು ಜಮೀನು ಹನಿ ನೀರಾವರಿಯಾಗಿದ್ದು ಇದರಲ್ಲಿ ನಿಂಬೆ, ತೆಂಗು, ಮಾವು, ಕರೀಬೇವು ಪೇರಲ, ಗುಲಾಬಿ, ಮಲ್ಲಿಗೆ, ಇತರ ಬೆಳೆಗಳನ್ನು ಬೆಳೆಯುತ್ತಿದ್ದಾರೆ.
- ತೊಗರಿ ಮತ್ತು ಹತ್ತಿ ಬೆಳೆಯಲ್ಲಿ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಹೆಚ್ಚಿನ ಇಳುವರಿ ಪಡಯುತ್ತಿದ್ದಾರೆ.
- ಜಮೀನಿನ ಬೆಳೆ ಉಳಿಕೆಗಳನ್ನು ಬಳಸಿ ಎರೆಹುಳ ಗೊಬ್ಬರವನ್ನು ತಯಾರಿಸುತ್ತಿದ್ದಾರೆ.
- ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದಲ್ಲಿ ದೊರಕುವ ಸಾವಯುವ ಗೊಬ್ಬರಗಳಾದ ಟ್ರೈಕೋಡರ್ಮ್, ಸುಡೊಮೊನಾಸ್, ಅಜೋಸ್ಪಿರಿಲಮ್, ಮೆಟರೈಜಿಯಮ್ ಮತ್ತು ಇತರೆ ಪರಿಕಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.
- ಇವರ ಜಮೀನಿನಲ್ಲಿ ಪ್ರತಿ ದಿನ 4 ರಿಂದ 6 ಜನ ಕೃಷಿ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದಾರೆ.
- ಕೃಷಿಯಿಂದ ಉತ್ತಮ ಆರ್ಥಿಕತೆಯನ್ನು ಹೊಂದಿ ನೆಮ್ಮದಿಯ ಜೀವನ ನಡೆಸುತ್ತಿದ್ದಾರೆ.



